ಮೇಲೆ ದ್ವೇಷ ಸಾಧಿಸೋದಕ್ಕೆ ಅವಳ ಮುಖದ ಮೇಲೆ ಆಸಿಡ್ ಸುರಿದ. ಈಗ ಆ ಹುಡುಗಿ ಆಸ್ಪತ್ರೆಲಿದ್ದಾಳೆ. ನಮ್ಮವನು ಜೈಲಿನಲ್ಲಿದಾನೆ. ಬೆಯಿಲ್ ಸಿಗೋ ಅವಕಾಶ ಕೂಡಾ ಇಲ್ಲ ಅಂತಿದಾರೆ ವಕೀಲರು. ಐ.ಪಿ.ಸಿ. 326 ಎ ಕೆಳಗೆ ಕೇಸು ಹಾಕಿದಾರೆ. ಅಪರಾಧ ಸಾಬೀತಾದರೆ ಕಡಿಮೆ ಅಂದ್ರೂ ಹತ್ತು ವರ್ಷ ಶಿಕ್ಷೆ ಬೀಳುತ್ತೆ.'

'ಆಸಿಡ್ ನಿಶಾಂತನಿಗೆ ಹೇಗೆ ಸಿಗ್ತು? ಪರ್ಮಿಷನ್ ಇಲ್ದೆ ಸಿಗೋದಿಲ್ಲವಲ್ಲ?' ಕೇಳಿದ ಅಮರ್.

'ಆಸಿಡ್ ದಾಳಿಗಳು, ದಾಳಿಗೆ ಗುರಿಯಾದವರಿಗೆ ಆರ್ಥಿಕ ಸಹಾಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಸಮಗ್ರವಾದ ಕಾನೂನು ಇಂಡಿಯಾದಲ್ಲಿ ಇಲ್ಲ. ಈ ವಿಷಯವಾಗಿ ಆಸಿಡ್ ದಾಳಿಗೆ ಗುರಿಯಾದ ದಿಲ್ಲಿ ಹುಡುಗಿ ಸುಪ್ರೀಮ್ ಕೋರ್ಟ್‌ನಲ್ಲಿ ಕೇಸು ಕೂಡಾ ಹಾಕಿದ್ದಾಳೆ.'

ಕಾಫಿ ಕಪ್‌ಗಳನ್ನು ತೆಗೆದುಕೊಂಡು ಹೋಗಲು ಹಾಲಿಗೆ ಬಂದ ಸಾವಿತ್ರಮ್ಮನಿಗೆ ತಂದೆ ಮಗ ಚಿಕ್ಕ ಮಗನ ಬಗ್ಗೆಯೇ ಮಾತಾಡ್ತಿರೋದನ್ನು ನೋಡಿ ದುಃಖ ಉಕ್ಕಿ ಬಂತು. ಸೆರಗನ್ನು ಬಾಯಿಗೆ ತುರುಕಿಕೊಂಡು ಅಳ ತೊಡಗಿದರು. ತಾಯಿಗೆ ಸಮಾಧಾನ ಹೇಳತೊಡಗಿದ ಅಮರ್.

'ನಿಶಾಂತನನ್ನು ಮೊದಲು ಜೈಲಿನಿಂದ ಹೊರ ತರೋ ಪ್ರಯತ್ನ ಮಾಡಿ. ಈ ಕಾಲದಲ್ಲಿ ದುಡ್ಡು ಖರ್ಚು ಮಾಡಿದರೆ ಆಗ್ದೇ ಇರೋ ಕೆಲಸ ಯಾವ್ದೂ ಇಲ್ಲ' ಎಂದಳು ಸಾವಿತ್ರಿ ಕಣ್ಣು ಒರೆಸಿಕೊಳ್ತಾ.

ಅವಳ ಮಾತಿಗೆ ಏನು ಹೇಳಬೇಕೋ ತಿಳಿಯದೆ ತಂದೆ ಮಗ ಮೌನವಾಗಿ ಕುಳಿತರು. ಅಮರ್ ತಾಯಿ ಕೈ ತನ್ನ ಕೈಗೆ ತೆಗೆದುಕೊಂಡು ಪ್ರೀತಿಯಿಂದ ನೇವರಿಸುತ್ತಾ ಹೇಳತೊಡಗಿದ.

'ಹೆತ್ತ ತಾಯಿ ಅಲ್ವೇನಮ್ಮಾ ನೀನು? ನಿಂಗೆ ಮಗ ತಪ್ಪು ಮಾಡಿದ್ರೂ ಕ್ಷಮಿಸೋ ದೊಡ್ಡಗುಣ ಇರುತ್ತೆ. ಆದ್ರೆ ಅದು ಸರಿ ಅಲ್ಲಮ್ಮ. ನಿಂಗೇ ಒಬ್ಬ ಮಗಳಿದ್ದು ಅವಳ ಮುಖದ ಮೇಲೆ ಯಾರಾದ್ರೂ ಹೀಗೆ ಆಸಿಡ್ ಎರಚಿ ಸುಂದರವಾದ ಮುಖವನ್ನು ವಿರೂಪಗೊಳಿಸಿದ್ರೆ ಏನ್ ಮಾಡ್ತಿದ್ದೆ? ಆ ರೌಡಿಯನ್ನು ಬಿಟ್ಟುಬಿಡಿ ಅಂತ ಎಲ್ರಿಗೂ ಹೇಳ್ತಿದ್ದಾ?'

ಮಗನ ಮಾತು ರುಚಿಸದಿದ್ದರೂ ಆ ಮಾತಿನಲ್ಲಿ ಅಡಗಿದ್ದ ಸತ್ಯವನ್ನು ಗ್ರಹಿಸಿ ಅಲ್ಲಿ ನಿಲ್ಲದೆ ಹೊರಟುಹೋದರು.

* * *

ಮರುದಿನ ಕಾಮಿನೇನಿ ಆಸ್ಪತ್ರೆಗೆ ಹೋದ ಅಮರ್.

ಸಾವೇರಿಯನ್ನು ನೋಡಲೇಬೇಕೆಂಬ ಹಟದಿಂದ ಬಂದಿದ್ದ.

ಸಾವೇರಿ ಕಡೆಯವರು ನಮ್ಮ ಮೇಲೆ ಕೋಪದಿಂದಿದ್ದಾರೆ. ಈ ಸಮಯದಲ್ಲಿ ಅಲ್ಲಿಗೆ ನೀನು ಹೋಗುವುದು ಅಷ್ಟು ಸರಿಯಲ್ಲ. ತಂದೆ ಹೇಳಿದರೂ ಕೇಳದೆ ಆಸ್ಪತ್ರೆಗೆ ಬಂದಿದ್ದ.

ಅಮರ್ ನಿಶಾಂತನ ಅಣ್ಣ ಎಂದು ತಿಳಿಯುತ್ತಿದ್ದಂತೆಯೇ ಸಾವೇರಿಯ ಚಿಕ್ಕಪ್ಪ ಅವನ ಮೇಲೆ ಬಿದ್ದು ಒಂದೇ ಸಮನೆ ಮುಷ್ಟಿಯಿಂದ ಗುದ್ದತೊಡಗಿದ. ಏಟುಗಳನ್ನು ತಪ್ಪಿಸಿಕೊಳ್ಳುವ ಪ್ರಯತ್ನವನ್ನೂ ಅಮರ್ ಮಾಡಲಿಲ್ಲ. ತಲೆ ತಗ್ಗಿಸಿಕೊಂಡು ಏಟುಗಳನ್ನು ಸಹಿಸಿಕೊಂಡ.

'ಬೆಳಿಗ್ಗೆ ಅಮೆರಿಕಾದಿಂದ ಬಂದೆ. ನಿಮ್ಮ ಮಗಳ ಮೇಲೆ ನನ್ನ ತಮ್ಮ ಆಸಿಡ್ ಎರಚಿದ ಅನ್ನೋ ವಿಷಯ ತಿಳಿಯಿತು. ನೋಡಿಕೊಂಡು ಹೋಗೋಣ ಅಂತ ಬಂದೆ. ನನ್ನ ತಮ್ಮ ಮಾಡಿದ್ದು ಮಹಾ ಅಪರಾಧ. ಅದನ್ನು ನಾನು ಒಪ್ಪುತ್ತೇನೆ' ಚೆದುರಿದ ಉಡುಪನ್ನು ಸರಿಪಡಿಸಿಕೊಳ್ಳುತ್ತಾ ಹೇಳಿದ.

ಆ ಯುವಕ ಅಮೆರಿಕಾದಿಂದ ಬಂದಿದ್ದಾನೆ ಎಂದು ತಿಳಿಯುತ್ತಿದ್ದಂತೆಯೇ ಸಾವೇರಿ ಕಡೆಯವರು ತಣ್ಣಗಾದರು.

'ಒಳಗಡೆ ಡಾಕ್ಟರ್ ಸಾವೇರಿಯನ್ನು ಪರೀಕ್ಷಿಸ್ತಿದಾರೆ. ಸ್ವಲ್ಪ ಹೊತ್ತು ಕೂತ್ಕೊಳಿ. ಅವರ ರೌಂಡ್ಸ್ ಮುಗಿದ ಮೇಲೆ ನೋಡುವಿರಂತೆ' ಎಂದ ಸಾವೇರಿಯ ಚಿಕ್ಕಪ್ಪ.

'ಹೇಗಿದ್ದಾರೆ?' ತನ್ನ ಮೇಲೆ ಪ್ರಹಾರ ಮಾಡಿದ ಸಾವೇರಿಯ ಚಿಕ್ಕಪ್ಪನನ್ನೇ ಸೌಮ್ಯವಾಗಿ ಕೇಳಿದ ಅಮರ್.

'ಸಾವೇರಿಗೆ ಚಿಕ್ಕಂದಿನಿಂದಲೂ ಕಷ್ಟಗಳೇ! ಬಾಲ್ಯದಲ್ಲೇ ತಂದೆ ತಾಯಿಯನ್ನು ಕಳೆದುಕೊಂಡಳು. ನಮ್ಮ ಹುಡುಗರ ಜೊತೆಯಲ್ಲೇ ಬೆಳೆದಳು. ಮನೆಯಲ್ಲಿ ಎಲ್ಲ ಕೆಲಸವನ್ನು ಮಾಡುತ್ತಲೇ ಶ್ರದ್ಧೆಯಿಂದ ಓದುತ್ತಾ ಬಿಟೆಕ್ ಮುಗಿಸಿದಳು. ಕೆಲಸ ಸಿಕ್ತು. ಭಗವಂತ ಕರುಣಾಮಯಿ! ಅವಳನ್ನು ಕಷ್ಟದ ಕಡಲಿನಿಂದ ದಡ ಸೇರಿಸಿದ ಎಂದುಕೊಳ್ಳುತ್ತಿರುವಾಗಲೇ ಬೆಟ್ಟವೇ ತಲೆ ಮೇಲೆ ಬಿದ್ದಂತೆ ಈ ಕಷ್ಟ! ನಮಗೇನೂ ಆಸ್ತಿಪಾಸ್ತಿಗಳಿಲ್ಲ. ದುಡಿದರೆ ಉಂಟು ಇಲ್ಲದಿದ್ದರೆ ಇಲ್ಲ. ಸಾವೇರಿ ಟ್ರೀಟ್‌ಮೆಂಟಿಗೇ ಲಕ್ಷಾಂತರ ರೂಪಾಯಿ ಬೇಕಾಗುತ್ತದೆಯಂತೆ. ಹೇಗೆ ಹೊಂದಿಸಬೇಕೋ? ಎಲ್ಲಿಂದ ತರಬೇಕೊ ಒಂದೂ ಅರ್ಥವಾಗುತ್ತಿಲ್ಲ. ಮಂತ್ರಿ ಮಹೋದಯರೇನೋ ಆಸ್ಪತ್ರೆಗೆ ಬಂದು ಮಾಧ್ಯಮಗಳ ಎದುರಿಗೆ ತೋರಿಕೆಯ ಸಹಾನುಭೂತಿ ತೋರಿಹೋದರು. ಆದರೆ ಆರ್ಥಿಕ ಸಹಾಯ ಒದಗಿಸಲಿಲ್ಲ. ಡಾಕ್ಟರ್‌ಗಳೇನೋ ಮಾತು ಮಾತಿಗೆ ದುಡ್ಡು ಜೊತೆ ಮಾಡ್ಕೊಳಿ ಅಂತ ಹೇಳಿ ಹೋಗ್ತಿದಾರೆ. ಏನ್ಮಾಡ್ಬೇಕೋ ಏನೋ? ಒಂದೂ ತಿಳಿಯದ ಅಯೋಮಯ ಸ್ಥಿತಿಯಲ್ಲಿ ನಾನು ನಿನ್ನ ಮೇಲೆ ಕೈ ಮಾಡಿದೆ. ಏನೂ ಅನ್ಕೋ ಬೇಡಪ್ಪ'.

'ಹಣದ ವಿಷಯ ನೀವು ಆಲೋಚನೆ ಮಾಡಬೇಡಿ. ಎಷ್ಟು ಖರ್ಚಾದರೂ ನಾನು ನೋಡಿಕೊಳ್ತೀನಿ. ಸಾವೇರಿಗೆ ಹೇಗಿದೆ ಹೇಳಿ?' ಮತ್ತೆ ಸಾವೇರಿಯ ವಿಷಯ ಕೇಳಿದ.

'ಮೊದಲು ಅವಳನ್ನು ಗವರ್ನಮೆಂಟ್ ಆಸ್ಪತ್ರೆಗೆ ಕರ್ಕೊಂಡ್ಹೋದ್ವಿ. ನಾವು ಹೋದ ಒಂದು ಗಂಟೆಗೆ ಅಲ್ಲಿನ ಡಾಕ್ಟರ್ ಬಂದು ಪ್ರಥಮ ಚಿಕಿತ್ಸೆ ಮಾಡಿ ಹೇಳಿದ್ರು.. ಬೆಂಕಿ ಅಪಘಾತದಲ್ಲಿ ಆದ ಗಾಯಗಳಿಗೆ ನಾವು ಟ್ರೀಟ್ಮೆಂಟ್ ಕೊಡ್ತೀವಿ. ಆದ್ರೆ ಆಸಿಡ್ ಗಾಯಗಳಿಗೆ ನಮ್ಮ ಹತ್ತಿರ ಔಷಧಿಗಳಿಲ್ಲ. ಯಾವುದಾದ್ರೂ ದೊಡ್ಡ ಆಸ್ಪತ್ರೆಗೆ ಕರ್ಕೊಂಡು ಹೋಗಿ ಅನ್ನೋ ಉಚಿತ ಸಲಹೆ ಕೊಟ್ಟು ಕಳಿಸಿದ್ರು'.

'ನಮ್ಮ ಸಾವೇರಿ ಕೆಲ್ಸ ಮಾಡ್ತಿದ್ದ ಕಂಪೆನಿಯವರು ಅವಳನ್ನು ಈ ಆಸ್ಪತ್ರೆಗೆ ಸೇರಿಸಿ 50 ಸಾವಿರ ಕೊಟ್ಟು ಹೋದ್ರು. ಆ ದುಡ್ಡು ಯಾವುದಕ್ಕೂ ಸಾಲೋದಿಲ್ಲ. ಮತ್ತಷ್ಟು ಖರ್ಚು ಮಾಡದ ಹೊರತು ಸಾವೇರಿ ಮಾಮೂಲು ಸ್ಥಿತಿಗೆ ಬರೋದಿಲ್ಲ. ಮುಖದ ಬಲಭಾಗ ಪೂರ್ತಿಯಾಗಿ ಸುಟ್ಟುಹೋಗಿದೆ. ಬಲಗಣ್ಣು, ಕಿವಿ ತುಂಬಾ ಹಾಳಾಗಿದೆಯಂತೆ. ಮೂಳೆಯನ್ನೂ ಕೊರೆದುಕೊಂಡು ಆಸಿಡ್ ತೂರಿದೆಯಂತೆ' ಎನ್ನುತ್ತಾ ಎಲ್ಲಾ ವಿವರಗಳನ್ನು ಆದ್ಯಂತ ತಿಳಿಸಿದ ಸಾವೇರಿ ಚಿಕ್ಕಪ್ಪ.

ವಾರ್ಡ್‌ಗೆ ಹೋಗಿ ಸಾವೇರಿಯನ್ನು ನೋಡಿದ. ಬಿರುಗಾಳಿಗೆ ಸಿಕ್ಕಿ ಬಸವಳಿದ ಎಳೆಗರುವಿನಂತೆ ಬೆಡ್ ಮೇಲೆ ಮುದುಡಿ ಮಲಗಿದ್ದಳು. ಉದ್ವೇಗದ ಹೊಂಡದಲ್ಲಿ ಹೂತುಹೋದಂತೆ ಕಂಡುಬಂದಳು ಅವಳು. ಭಯಗಳ ಸರಪಳಿ ಅವಳನ್ನು ಬಂಧಿಸಿದಂತಿತ್ತು.

ಉದ್ಯೋಗ ಇರುತ್ತೋ ಇಲ್ವೋ!

ಎಷ್ಟು ತಿಂಗಳು ಆಸ್ಪತ್ರೆಯಲ್ಲೇ ಇರಬೇಕಾಗುತ್ತೋ

ಮುಖ ಎಷ್ಟು ವಿಕಾರವಾಗಿ ಕಾಣುತ್ತದೆಯೋ! ತನ್ನನ್ನು ನೋಡಿ ಜನರು ಹೆದರಬಹುದು! ಆಸ್ಪತ್ರೆ ಖರ್ಚು ಯಾರು ನೋಡ್ಕೊಳ್ತಾರೆ?

ಮತ್ತೆ ತಾನು ತನ್ನ ಕಾಲ ಮೇಲೆ ನಿಲ್ತೀನಾ?

ಎಲ್ಲರೂ ತನ್ನತ್ತ ಬೀರುವ ಅನುಕಂಪದ ನೋಟವನ್ನು ಹೇಗೆ ಸಹಿಸಿಕೊಳ್ಳುವುದು?

ಧೈರ್ಯದಿಂದ ಮುನ್ನುಗ್ಗಿ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆಯೇ?

ಒಂದೇ ಎರಡೇ ಅವಳನ್ನು ಕಿತ್ತು ತಿನ್ನುತ್ತಿದ್ದ ಪ್ರಶ್ನೆಗಳು!

ಅಮರ್ ಕೂಗಿದ್ದು ಕೇಳಿ ಪಕ್ಕಕ್ಕೆ ತಿರುಗಿದಳು. ಅವನು ಏನು ಹೇಳುತ್ತಿದ್ದಾನೋ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಅವಳು ಇರಲಿಲ್ಲ. ಕೆಂಪಗೆ ಕಾದ ಕುಲುಮೆಯಲ್ಲಿದ್ದಂತೆ ತಲೆ ಒಂದೇ ಸಮನೆ ನೋಯುತ್ತಿತ್ತು.

ಮಂಚದ ಬಳಿ ಹತ್ತು ನಿಮಿಷ ಮೌನವಾಗಿ ನಿಂತ ಅಮರ್ ಅಲ್ಲಿಂದ ಹೊರಬಂದು ಸಾವೇರಿಗೆ ವೈದ್ಯ ಮಾಡುತ್ತಿದ್ದ ವೈದ್ಯರ ರೂಮಿನತ್ತ ಹೆಜ್ಜೆ ಹಾಕಿದ.

ಡಾಕ್ಟರ್‌ಗೆ ತನ್ನನ್ನು ತಾನು ಪರಿಚಯಿಸಿಕೊಂಡ ಅಮರ್.

'ಅಮೆರಿಕಾದಲ್ಲಿ ವೈದ್ಯ ವೃತ್ತಿಯಲ್ಲಿರೋ ನಿಮಗೆ ನಾನು ಹೆಚ್ಚಿಗೆ ಹೇಳುವ ಅವಶ್ಯಕತೆ ಇಲ್ಲ. ಶಾರೀರಕ, ಮಾನಸಿಕ ಸಮಸ್ಯೆಗಳನ್ನು ಎದುರಿಸುವ ಮನೋ ಬಲದ ಅವಶ್ಯಕತೆಯಿದೆ. ಈಗ ಆಕೆಗೆ ನಾವೆಲ್ಲ ನಿನ್ನ ಜೊತೆಗೆ ಇದ್ದೇವೆ; ನಿನಗೆ ಭಯ ಬೇಡ. ನೀನು ಮತ್ತೆ ಮೊದಲಿನಂತಾಗ್ತಿ. ಅಂತ ಧೈರ್ಯ ಹೇಳೋ ವ್ಯಕ್ತಿಗಳ ಅವಶ್ಯಕತೆ ಇದೆ. ಆಗಲೇ ನಮ್ಮ ಟ್ರೀಟ್‌ಮೆಂಟಿಗೆ ರೆಸ್ಪಾಂಡ್ ಸಿಗುತ್ತೆ. ಆ ಹುಡುಗಿ ಸ್ವಲ್ಪ ಚೇತರಿಸಿಕೊಂಡ ನಂತರ ಕಣ್ಣು, ಕಿವಿ ಮೊದಲಾದ ಕೆಲವು ಕಡೆ ಐದಾರು ಸರ್ಜರೀ ಆಗಬೇಕಿದೆ. 'ಷಿ ಹಾಸ್ ಟು ಅಂಡರ್ ಗೋ ರಿ